**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

## ಸಿ.ಸಿ.ನಂ.526/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೆಂಪರಾಜನಾಯಕ | ಸಿ.ಡಬ್ಲ್ಯೂ-4 |
| ತಂದೆಯ ಹೆಸರು | : | ಕೆಂಪನಾಯಕ | ಪಿ.ಡಬ್ಲ್ಯೂ-3 |
| ವಯಸ್ಸು | : | 38 ವರ್ಷ | - |
| ಉದ್ಯೋಗ | : | ಕೂಲಿ ಕೆಲಸ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **21.10.2023.** |
| ವಾಸಸ್ಥಳ | : | ಕುಂದೂರು ಗ್ರಾಮ | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು. ಚಾಸಾ-5 ನನಗೆ ಗೊತ್ತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಸಹಿಯು ತಮ್ಮದೇ ಎಂದು ನೋಡಿ ಗುರುತಿಸುವಂತೆ ಹೇಳಿದ್ದು ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ನಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

**(ಎಪಿಪಿಯವರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿಃ 21.01.2019 ರಂದು ಸರಗೂರು ಪೊಲೀಸ್ ಠಾಣೆಯಲ್ಲಿ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಆರೋಪಿಯ ಬಾಬ್ತು 90 ಎಂ.ಎಲ್ ನ ವಿಂಡ್ಸರ್ ಡೀಲಕ್ಸ್ ವಿಸ್ಕಿಯ 46 ಪೌಚುಗಳು ಮತ್ತು 90 ಎಂ.ಎಲ್ ನ ವಿಂಡ್ಸರ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು ಹಾಗೂ ಕೆಎ-45 ವೈ 8734 ನೊಂದಣಿಯುಳ್ಳ ಹೀರೋ ಸ್ಪೆಂಡರ್ ಪ್ಲಸ್ ಬೈಕು ಮತ್ತು ಪ್ಲಾಸ್ಟಿಕ್ ಚೀಲವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-1 ರವರು ದಾಳಿ ಮಾಡುವ ಸಮಯದಲ್ಲಿ ಅವರ ಜೊತೆಗಿದ್ದು, ಆರೋಪಿಯನ್ನು ನಮ್ಮ ಸಮಕ್ಷಮ ದಸ್ತಗಿರಿ ಮಾಡಿರುತ್ತಾರೆ ಎಂದು ಈಗ ಓದಿ ಹೇಳಿ ಕೇಳಿಕೊಂಡ ನಿ.ಪಿ -9 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**